# ಆನೆ ಬಂದಿತಮ್ಮಾ ಮರಿಯಾನೆ ಬಂದಿತಮ್ಮಾ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 44.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 327
3. **Note:** Lyrics in both the above references are same and the singer has followed these wordings.
4. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru also in the books of Gorebala Hanumantha Rayaru.

ರಾಗ: ಶ್ರೀರಾಗ ತಾಳ: ಆದಿ

ಆನೆ ಬಂದಿತಮ್ಮಾ, ಮರಿಯಾನೆ ಬಂದಿತಮ್ಮಾ ॥ ಪ ॥

ತೊಲಗಿರಿ ತೊಲಗಿರಿ ಪರಬ್ರಹ್ಮ ಬಲು
ಸರಪಣಿ ಕಡಕೊಂಡು ಬಂತಮ್ಮಾ ॥ ಅಪ ॥

ಕಪಟ ನಾಟಕದ ಮರಿಯಾನೆ,
ನಿಕಟ ಸಭೆಯೊಳು ನಿಂತಾನೆ
ಶಕಟನ ಬಂಡಿಯ ಮುರಿದಾನೆ
ಕಪಟ ನಾಟಕದಿಂದ ಸೋದರ ಮಾವನ
ನಕಟಕಟೆನ್ನದೆ ಕೊಂದಾನೆ ॥ ೧ ॥

ಕೀಳು ಭುವನವನುಂಡಾನೆ ಸ್ವಾಮಿ
ಬಾಲಕನೆಂಬ ಚೆಲ್ವಾನೆ
ಮದ ಗೋವುಗಳ ಕೂಡಿ ನಲಿದಾನೆ
ಚೆಲುವ ಕಾಳಿಂಗನ ಹೆಡೆಯೊಳಾಡುತ್ತ

ಸೊಬಗು ಹೆಚ್ಚಿದ ಪಟ್ಟದಾನೆ
ಮದ ಸೊಕ್ಕಿ ಬರುತಾನೆ ॥ ೨ ॥

ಭೀಮಾರ್ಜುನರನ್ನು ಗೆಲಿಸ್ಯಾನೆ
ಪರಮ ಭಾಗವತರ ಪ್ರಿಯಾನೆ
ಮುದದಿಂದ ಮಥುರೆಲಿ ನಿಂತಾನೆ
ಮದ ಮುಖದಸುರರ ದಿಗಿಲಿಟ್ಟು ಕೊಂದು
ಪದುಮಲೋಚನ ಪುರಂದರ ವಿಠಲನೆಂಬಾನೆ ॥ ೩ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು**:

ದಷ್ಟಪುಷ್ಟವಾಗಿರುವ ಸಣ್ಣ ಮಗು ಮರಿಯಾನೆಯಂತೆ ತೂಗಾಡುತ್ತ ಬರುವ ಚಿತ್ರ.

**ತೊಲಗಿರೆ** – ದೂರ ಸರಿಯಿರಿ.

**ಕಡಕೊಂಡು** – ಕಡಿದುಕೊಂಡು.

**ಸೋದರ ಮಾವನ** – ಕಂಸನನ್ನು.

**Classification:** Keerthane
**Ankita:** sri purandara vittala
**Location:** NA
**Category:** Sankeerna
**Sub-Category:** Ane, parabrahma, mosa, sabhe, asura, kamsa, govu, kalinga, bhima, pandava, bhagavata, Priya, Mathura,
**Pravachana:** NA
**Explanation:** NA